ಓ ಎಸ್ ನಂಃ 546/2022
ಪಿ.ಡಬ್ಲ್ಯೂ.3 (ಅನಂದ)

ದಿನಾಂಕ: 21-08-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀಸವಾಲುಃ ಶ್ರೀ.ಎಮ್.ಎನ್.ಸಿ. ಪ್ರತಿವಾದಿ ಪರ ವಕೀಲರಿಂದಃ

ನಾನು ಕಳೆದ 22 ವರ್ಷಗಳಿಂದ ದಸ್ತಾವೇಜು ಬರಹಗಾರನಾಗಿ ಕೆಲಸ ಮಾಡುತ್ತಿದ್ದೇನೆ. ದಸ್ತಾವೇಜುಗಳನ್ನು ಬರೆಯಿಸಿಕೊಂಡು ಬಂದವರು ತಂದ ದಾಖಲೆಗಳನ್ನು ಪರಿಶೀಲನೆ ಮಾಡಿ ಅವು ಸರಿ ಇವೆಯೋ ಇಲ್ಲವೊ ಎಂದು ನೋಡಿ ದಾಖಲೆ ತಯಾರ ಮಾಡುತ್ತೇವೆ ಎಂದರೆ ಸರಿ.

2. ಖರೀದಿ ಕರಾರ ಪತ್ರ ಬರೆಸಿಕೂಳ್ಳುವಾಗ ಪಕ್ಷಗಾರರು ನನ್ನ ಬಳಿ ತಮ್ಮ ತಮ್ಮ ಆಧಾರ ಕಾರ್ಡ ಮತ್ತು ಉತಾರಗಳನ್ನು ತೆಗೆದುಕೊಂಡು ಬಂದಿದ್ದರು. ಉತಾರದಲ್ಲಿ ಎಷ್ಟು ಜನರ ಹೆಸರು ಇದ್ದವು ಎಂದು ನನಗೆ ನೆನಪಿಲ್ಲ. ಉತಾರದಲ್ಲಿ ನಮೂದಿಸಿರುವ 04 ಎಕರೆ ಕ್ಷೇತ್ರ ಜಂಟಿಯಾಗಿತ್ತು. ಉತಾರ ತೆಗೆದುಕೊಂಡು ನನ್ನ ಬಳಿ ಬಂದಾಗ ಪಕ್ಷಗಾರರು ನನಗೆ ಹೇಳಿದ ಪ್ರಕಾರ ತಮ್ಮ ಸ್ವಯಾರ್ಜಿತ ಆಸ್ತಿ ಎಂದು ಹೇಳಿರುತ್ತಾರೆ. ನಾನು ಸ್ವಯಾರ್ಜಿತ ಆಸ್ತಿ ಎಂದು ತೋರಿಸಲು ದಾಖಲೆಗಳನ್ನು ತೋರಿಸಿ ಎಂದು ಕೇಳಿಲ್ಲ. ದಾಖಲೆಗಳನ್ನು ಕೇಳಲು ನನಗೆ ತೊಂದರೆ ಇರಲಿಲ್ಲ.

3. ವಾದಿ ಮತ್ತು ಪ್ರತಿವಾದಿಯರು 11 ಗಂಟೆಗೆ ನನ್ನ ಕಚೇರಿಗೆ ಬಂದಿದ್ದರು. ಆಗ ನಾನು ದಾಖಲೆಗಳು ಬರೆಯುತ್ತಿದ್ದೆ. ಯಾರ ದಾಖಲಾತಿ ತಯಾರ ಮಾಡುತ್ತಿದ್ದೆ ನನಗೆ ನೆನಪಿಲ್ಲ. ಪಕ್ಷಗಾರರು ನನ್ನ ಬಳಿ 11 ಗಂಟೆಗೆ ಬಂದಿರುತ್ತಾರೆ ಅವರು ಬಂದ ಅರ್ಧ ಗಂಟೆ ಸಮಯದಲ್ಲಿ ಕರಾರು ಪತ್ರ ತಯಾರ ಮಾಡಿರುತ್ತೇನೆ. ಪಕ್ಷಗಾರರು ನಮ್ಮ ಕಚೇರಿಯಲ್ಲಿಯೆ ವ್ಯವಹಾರದ ಮೊತ್ತ ಕೊಟ್ಟಿರುತ್ತಾರೆ. ಕರಾರು ಪತ್ರದಲ್ಲಿ ನನ್ನ ಸಮಕ್ಷಮ ರೂ.15,00,000/- ಕೊಡಲಾಗಿದೆ ಎಂದು ಬರೆದಿಲ್ಲ.

4. ಪಕ್ಷಗಾರರು ಖರೀದಿ ಕರಾರು ಪತ್ರ ರದ್ದುಪಡಿಸಲು ದಾಖಲೆಗಳು ಬರೆದುಕೊಡಿ ಎಂದು ಬಂದಾಗ ನಾನು ಬರೆದುಕೊಟ್ಟಿರುತ್ತೇನೆ. ಪ್ರತಿವಾದಿಯರು ನನ್ನ ಬಳಿ ಬಂದು ಭದ್ರತೆ ಪತ್ರ ಬರೆದುಕೊಡಿ ಎಂದು ಕೇಳಿದ್ದು ಭದ್ರತೆ ಪತ್ರ ಬರೆದುಕೊಡಲು ಲೈಸನ್ಸ್ ಬೇಕು ಎಂದು ಹೇಳಿ ನಾನು ಖರೀದಿ ಕರಾರು ಪತ್ರ ಬರೆದುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

5. ಬಡ್ಡಿಯ ಮೇಲೆ ಹಣ ಪಡೆದ ವಿಚಾರವಾಗಿ ನಾನು ಯಾವುದೇ ದಾಖಲೆ ಬರೆದಿಲ್ಲ. ಬಡ್ಡಿಯ ಮೇಲೆ ಹಣ ಪಡೆದಾಗ ದಾಖಲೆ ಬರೆಯಬೇಕಾದಲ್ಲಿ ಬಡ್ಡಿಯ ಮೇಲೆ ಹಣ ಕೂಡಲು ಪರವಾಣಿಗೆ ಬೇಕು ಆ ಪರವಾಣಿಗೆ ಇಲ್ಲದೇ ಇದ್ದುದ್ದರಿಂದ ಖರೀದಿ ಕರಾರು ಪತ್ರ ಬರೆಯಲಾಗುತ್ತದೆ ಎಂದರೆ ಸರಿಯಲ್ಲ.

6. ಖರೀದಿ ಕರಾರ ಪತ್ರ ಬರೆದ ನಂತರ ಅದನ್ನು ಪಕ್ಷಗಾರರ ಕೈಯಲ್ಲಿ ಕೊಟ್ಟು ಉಪ-ನೋಂದಾವಣಿ ಅಧಿಕಾರಿಗಳ ಕಚೇರಿಗೆ ಕಳುಹಿಸಿ ಕೊಟ್ಟಿರುತ್ತೇನೆ. ಖರೀದಿ ಕರಾರು ರದ್ದತಿ ಪತ್ರವನ್ನು ತೋರಿಸಿದ್ದು ಅದನ್ನು ನೋಡಿ ಸಾಕ್ಷಿದಾರರು ಸದರಿ ಖರೀದಿ ಕರಾರು ರದ್ದತಿ ಪತ್ರವನ್ನು ತಾವೇ ಬರೆದಿದ್ದು ಅದಕ್ಕೆ ಸಂಬಂಧಪಟ್ಟ ಶುಲ್ಕವನ್ನು ಸಹ ತುಂಬಲಾಗಿದೆ ಎಂದು ಹೇಳುತ್ತಾರೆ. ಖರೀದಿ ಕರಾರು ರದ್ದತಿ ಪತ್ರವನ್ನು ದಿನಾಂಕ 13.12.2021 ರಂದು ಬರೆಯಲಾಗಿದೆ.

7. ಖರೀದಿ ಕರಾರು ಪತ್ರ ಆಗಲಿ ಖರೀದಿ ಕರಾರ ರದ್ದತಿ ಪತ್ರ ಆಗಲಿ ಯಾರು ಮಾಡಿಸಿಕೊಳ್ಳಲು ನಮ್ಮ ಕಚೇರಿಗೆ ಬರುತ್ತಾರೊ ಅವರಿಗೆ ನಾವು ದಾಖಲೆಗಳನ್ನು ತಯಾರ ಮಾಡಿಕೂಡುತ್ತೇವೆ. ದಿನಾಂಕ 13.12.2021 ರಂದು ಬರೆದ ಖರೀದಿ ಕರಾರ ರದ್ದತಿ ಪತ್ರವನ್ನು ಪ್ರತಿವಾದಿಯರಿಗೆ ಕೊಟ್ಟಿರುತ್ತೇನೆ. ಖರೀದಿ ಕರಾರ ಪತ್ರ ಆಗಲಿ ಖರೀದಿ ಕರಾರ ರದ್ದತಿ ಪತ್ರ ಆಗಲಿ ಬರೆದುಕೊಟ್ಟ ನಂತರ ಅದು

ಮುಂದೆ ನೋಂದ ಆಗಿದೆಯೋ ಇಲ್ಲವೊ ನಾವು ವಿಚಾರಿಸುವುದಿಲ್ಲ. ವಾದಿಯರು ಮೇಲಿಂದ ಮೇಲೆ ಬಡ್ಡಿ ವ್ಯವಹಾರದ ಕುರಿತು ನನ್ನ ಬಳಿ ಖರೀದಿ ಕರಾರು ಪತ್ರ ಬರೆಯಿಸಿಕೊಳ್ಳಲು ಬರುತ್ತಾರೆ ಎಂದರೆ ಸರಿಯಲ್ಲ. ವಾದಿಯದು ಬಡ್ಡಿ ವ್ಯವಹಾರ ಎಂದು ಗೊತ್ತಿದ್ದರೂ ಸಹ ವಾದಿಗೆ ನಾನು ನಿಪಿ-1ರ ಖರೀದಿ ಕರಾರ ಪತ್ರವನ್ನು ಬರೆದುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

8. ದಿನಾಂಕ 13.12.2021 ರಂದು ಆದ ಖರೀದಿ ಕರಾರ ರದ್ದತಿ ಪತ್ರದಲ್ಲಿ ದಿನಾಂಕ 08.06.2020 ರಂದು ಆದ ಖರೀದಿ ಕರಾರ ಪತ್ರ ರದ್ದು ಮಾಡಲಾಗಿದೆ ಎಂದು ಬರೆಯಲಾಗಿದೆ ಎಂದರೆ ಸರಿ. ಈ ಮುಂಚೆ ಆದ GKKD-G-765 ಇದರ ಕುರಿತು ಖರೀದಿ ಕರಾರ ರದ್ದತಿ ಪತ್ರ ಆಗಿದೆ ಎಂದರೆ ಸರಿ. ನಾನು ಬರೆದ ಪತ್ರ ಭದ್ರತೆಗಾಗಿ ಬರೆದ ಪತ್ರ ಆಗಿದ್ದರೂ ಸಹ ವಾದಿಗೆ ಸಹಾಯ ಮಾಡುವ ಉದ್ದೇಶದಿಂದ ಸದರಿ ಪತ್ರ ಖರೀದಿ ಕರಾರು ಪತ್ರ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

9. ಕರಾರು ಪತ್ರ ಬರೆದ 10 ನಿಮಿಷದಲ್ಲಿ ದುಡ್ಡು ಎಣಿಸಿಕೊಂಡಿರುತ್ತಾರೆ. ನಾನು ಖರೀದಿ ಕರಾರು ಪತ್ರ ಬರೆದು ವಾದಿಯ ಕೈಯಲ್ಲಿ ಸುಮಾರು 11.30 ಗಂಟೆಗೆ ಕೊಟ್ಟಿರುತ್ತೇನೆ. ಖರೀದಿ ಕರಾರು ಪತ್ರ ಬರೆಯುವಾಗ ಪ್ರತಿವಾದಿಯ ಮಕ್ಕಳ ಸಹಿ ಬೇಕಾಗುವುದಿಲ್ಲ ಖರೀದಿ ಪತ್ರ ಬರೆದುಕೊಡುವಾಗ ಅವರ ಸಹಿ ಬೇಕಾಗುತ್ತದೆ ಎಂದು ಹೇಳಿರುತ್ತೇನೆ. ಕರಾರ ಪತ್ರ ಓದುವಾಗ ಕರಾರ ಪತ್ರದಲ್ಲಿ ನನ್ನ ಸಮಕ್ಷಮ ರೂ.15,00,000/- ದುಡ್ಡು ಎಣಿಸಿಕೊಟ್ಟಿರುತ್ತಾರೆ ಎಂದು ನಾನು ಪಕ್ಷಗಾರರಿಗೆ ಹೇಳಿಲ್ಲ.

<u>ಮರುವಿಚಾರಣೆಃ</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ

(ಉಮೇಶ ಎಸ್ ಅತನೂರೆ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ